ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೂ ಒಪ್ಪಿಗೆ ನೀಡಲಾಯಿತು.

2. ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶ ಯೋಜನಾ (ತಿದ್ದುಪಡಿ) ವಿಧೇಯಕ 1991

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಸಚಿವರು) : ಮಾನ್ಯ ಅಧ್ಯಕ್ಷರೇ 1991ನೇ ಕರ್ನಾಟರ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶ ಯೋಜನಾ (ತಿದ್ದುಪಡಿ) ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾವವನ್ನು ಮಂಡಿಸಲಾಯಿತು.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಅಧ್ಯಕ್ಷರೆ, ಈಗ ಇರುವ ಕಾಯ್ದೆ 1961ನೇ ಇಸವಿಯದ್ದಾಗಿದ್ದು ಈಗ ಮುಖ್ಯರಾಗಿ ಕಾಂಪ್ರೆಹೆನ್ಸಿವ್ ಡೆವಲೆಪ್‌ಮೆಂಟ್ ಪ್ಲಾನ್, ಔಟ್ ಲೈನ್ ಡೆವಲೆಪ್‌ಮೆಂಟ್ ಪ್ಲಾನ್ ಎರಡೂ ಸ್ಯಾಂಕ್ಷನ್ ಆದಮೇಲೆ 5 ವರ್ಷಗಳ ಕಾಲ ಬದಲಾವಣೆ ಮಾಡುವುದಕ್ಕೆ ಸರ್ಕಾರಕ್ಕೆ ಕೂಡ ಅಧಿಕಾರ ಇಲ್ಲ ಎಂದು ಈಗಾಗಲೇ ಅಡ್ವೋಕೇಟ್ ಜನರಲ್‌ರವರು ಒಪ್ಪೀನಿಯನ್ ಕೊಟ್ಟಿದ್ದಾರೆ. ಆ ದೃಷ್ಟಿಯಿಂದ ಈ ತಿದ್ದುಪಡಿಯನ್ನು ತರುತ್ತಿದ್ದೇವೆ. ಈ ಮಸೂದೆಯಲ್ಲಿ ಸರ್ಕಾರ ಸಾಕಷ್ಟು ನೋಟೀಫಿಕೇಷನ್ ಮತ್ತು ಪೇಪರ್‌ನಲ್ಲಿ ಪಬ್ಲಿಷ್ ಮಾಡಿ 15 ದಿವಸಕ್ಕೆ ಮೊದಲು ಮಾಡಿಬಿಟ್ಟರೆ ಪ್ಲಾನಿಂಗ್ ಅಥಾರಿಟಿಯವರು ಕಳುಹಿಸುವ ಛೇಂಝ್ ಆಫ್ ಪ್ಲಾನ್ ಏನಿದೆ ಅದನ್ನು ಸರ್ಕಾರ ಅಪ್ರೂವ್ ಮಾಡಬಹುದು ಎಂದು ಸರ್ಕಾರಕ್ಕೆ ಅಧಿಕಾರ ಕೊಡುತ್ತಿದ್ದೇವೆ. ಮತ್ತೆ ಇನ್ನೂ 2-3 ಸಣ್ಣ ಬದಲಾವಣೆಗಳನ್ನು ಮಾಡಿದ್ದೇವೆ. ಪ್ಲಾನ್ ಆಪ್ರೂ ಮಾಡಬೇಕಾದರೆ ಸಿಂಗಲ್ ವಿಂಡೋ ಸಿಸ್ಟಮ್ ಮಾಡಬೇಕೆಂದು, ಕಾರ್ಪೊರೇಷನ್ ಲೆವಲ್‌ನಲ್ಲಿ ಕಮೀಷನರ್ ಮತ್ತು ಛೀಫ್ ಆಫೀಸರ್‌ಗೆ ಅಧಿಕಾರ ಕೊಟ್ಟು ಬಹುಶಃ ಒಂದೇ ಸಾರಿ ಕಾರ್ಪೊರೇಷನ್‌ನಲ್ಲಿ ಕಮೆನ್ಸ್‌ಮೆಂಟ್ ಸರ್ಟಿಫಿಕೇಟ್ ಇಲ್ಲದೆ ಒಂದು ಪ್ಲಾನ್ ಅಪ್ರೂವ್‌ಗೆ ಸರಳವಾಗಿ ಒಂದು ರೂಪ ಕೊಡುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ ಮತ್ತು 5 ವರ್ಷಗಳಿಂದ ಒಂದು ಸಾರಿ ಎನ್ನುವ ಬದಲು ಸಿಡಿಪಿ ಮತ್ತು ಒಡಿಪಿ ಆದಮೇಲೆ 10 ವರ್ಷಕ್ಕೆ ಪರಿಷ್ಕರಣ ಮಾಡುವುದಕ್ಕೆ ಅವಧಿಯನ್ನು ಆಳವಡಿಸಿದ್ದೇವೆ. ಏಕೆಂದರೆ 5 ವರ್ಷ ಬಹಳ ಕಡಿಮೆಯಾಗುತ್ತದೆ ಮತ್ತೆ ನಮ್ಮ ಕರ್ನಾಟಕದಲ್ಲಿ ನಾಲ್ಕು ಪ್ಲಾನಿಂಗ್ ಅಥಾರಿಟಿಗಳು ಇವೆ. ಆದರೆ ಅಲ್ಲಿನ ಮೆಂಬರ್ ಸೆಕ್ರೆಟರಿಯ ಅಧಿಕಾರ ಏನು ಎಂದು ಡಿಸೈಡ್ ಮಾಡಿಲ್ಲ. ಬಿಡಿಎ ಮತ್ತು ಅರ್ಬನ್ ಡೆವಲೆಪ್‌ಮೆಂಟ್ ಅಥಾರಿಟಿಯ ಕಮೀಷನರ್‌ಗೆ ಏನು ಅಧಿಕಾರ ಇದೆ ಅಂತಹ ಅಧಿಕಾರವನ್ನು ಇವರಿಗೆ ಕೊಟ್ಟಿದ್ದೇವೆ ಎಂದರೆ ಪ್ಲಾನಿಂಗ್ ಅಥಾರಿಟಿ ಏನಾದರೂ ರೆಸಲ್ಯೂಷನ್ ಮಾಡಿದರೆ ಸರ್ಕಾರಕ್ಕೆ ಅದರ ಬಗ್ಗೆ ರೆಫರ್ ಮಾಡಬಹುದು. ಕಾನೂನು ವಿರುದ್ಧವಾಗಿ ಏನಾದರೂ ರೆಸಲ್ಯೂಷನ್ ಪಾಸ್ ಮಾಡಿದರೆ ಅದನ್ನು ಸರ್ಕಾರಕ್ಕೆ ರೆಫರ್ ಮಾಡಬಹುದು. ಸರ್ಕಾರಕ್ಕೆ ಆ ರೆಸಲ್ಯೂಷನನ್ನು ತಡೆ ಹಿಡಿಯುವದಕ್ಕೆ ಅಧಿಕಾರ ಇದೆ. ಇದು ಸರಳವಾದ ತಿದ್ದುಪಡಿ ಇದ್ದು ಮಾನ್ಯ ಸದಸ್ಯರು ಇದನ್ನು ಪಾಸ್ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಮಂತ್ರಿಗಳು ಇದು ಬಹಳ ಸರಳವಾದ ತಿದ್ದುಪಡಿ ಎನ್ನತಕ್ಕಂತಹ ಮಾತನ್ನು ಅಲ್ಲಿ ಹೇಳಿದ್ದಾರೆ. ಅದರ ಉದ್ದೇಶಗಳನ್ನು ನಾನು ಪ್ರಶ್ನೆ ಮಾಡುವುದಕ್ಕೆ ಬಯಸುವುದಿಲ್ಲ. ಈ ತಿದ್ದುಪಡಿ ಬಹಳ ಮಹತ್ತರವಾದಂತಹ ಬದಲಾವಣೆಗಳನ್ನು ಮಾಡತಕ್ಕಂತದ್ದು ಎಂದು ನಾನು ತಿಳಿದಿದ್ದೇನೆ. ಚೇಂಜ್ ಆಫ್ ಲ್ಯಾಂಡ್ ಯೂಸ್ 5 ವರ್ಷಕ್ಕೆ ಬದಲಾಗಿ 10 ವರ್ಷ ಮಾಡತಕ್ಕಂಥಹ ಒಂದು ಉದ್ದೇಶ ಏನು ಇದೆ ಎನ್ನುತಕ್ಕಂಥಹ ಮಾತನ್ನು ಹೇಳಿದ್ದೀರಿ. ಆದರ ಬಗ್ಗೆ ಎರಡು ವಾದಗಳು ಇವೆ. 10 ವರ್ಷ ಮಾಡುವುದರ ಬಗ್ಗೆ ನನ್ನದು ತಕರಾರು ಇಲ್ಲ.

ಆದರೆ ಈಗಿರತಕ್ಕಂಥಹ ಅಥಾರಿಟಿಯ ಬಗ್ಗೆ ಇಲ್ಲಿ ತಾವೇನು ಹೇಳಿದ್ದೀರಿ ಎಂದರೆ ಮುನಿಸಿಪಲ್ ಕೌನ್ಸಿಲ್ ಎನ್ನತಕ್ಕಂತಹ ಸಂದರ್ಭದಲ್ಲಿ ಮುನಿಸಿಪಲ್ ಚೀಪ್ ಆಫೀಸರ್‌ಗೆ, ಕೊಡಬೇಕೆನ್ನತಕ್ಕಂತಹ ಉದ್ದೇಶವಿದೆ ಎಂದು ಹೇಳಿದ್ದೀರಿ. ಅದೇ ರೀತಿಯಲ್ಲಿ ಕಾರ್ಪೊರೇಷನ್‌ನಲ್ಲಿರತಕ್ಕಂಥಹ ಕಮಿಷನರ್‌ಗೆ ಈ ಅಥಾರಿಟಿಯನ್ನು ವರ್ಗಾವಣೆ ಮಾಡತಕ್ಕಂತಹ ವಿಚಾರವನ್ನು ಇಲ್ಲಿ ಹೇಳುತ್ತಿದ್ದೀರಿ. ಒಂದು ಸಣ್ಣ ಉದಾಹರಣೆ ಕೊಡುತ್ತೇನೆ. ನಾವೆಲ್ಲರೂ ಪ್ರತಿನಿತ್ಯವೂ ಏರ್‌ಪೋರ್ಟಿಗೆ ಹೊಗುತ್ತೇವೆ. ಬಲಗಡೆ ದೊಡ್ಡ ಆಸ್ಪತ್ರೆ ಕಟ್ಟಡ ಒಂದಿದೆ. ಅದು ಯಾವುದೇ ಇರಲಿ ಅವರ ವಿರೋಧ ನನಗೇನೂ ಇಲ್ಲ. ಆಸ್ಪತ್ರೆ ಕಟ್ಟಡಕ್ಕೆ ಪರ್ಮಿಷನ್‌ನನ್ನು ಅವರು ತೆಗೆದುಕೊಂಡಿದ್ದಾರೆಯೇ ಯಾರಿಂದ ತೆಗೆದುಕೊಂಡಿದ್ದಾರೆಂಬುದನ್ನು ತಾವು ವಿಚಾರ ಮಾಡಿ. ಎಲ್ಲಾ ಪಟ್ಟಣ ಪ್ರದೇಶ ಸುತ್ತಮುತ್ತ ಗ್ರಾಮ ಪಂಚಾಯಿತಿಗಳೆಂದು ಮಾಡಿ ಮುನಿಸಿಪಾಲಿಟಿಗೆ ಪಕ್ಕದಲ್ಲೇ ಮುನಿಸಿಪಲ್ ಲಿಮಿಟ್ ಎಂದು ಫಿಕ್ಸ್ ಮಾಡಿರುತ್ತಾರೆ. ಅದರ ಪಕ್ಕದಲ್ಲೇ ಪಂಚಾಯಿತಿ ಇರುತ್ತದೆ. ಆ ಪಂಚಾಯಿತಿ ಕಾರ್ಯದರ್ಶಿಗಳಿಗೆ ನಾವು ಇಷ್ಟು ದೊಡ್ಡ ಅಧಿಕಾರವನ್ನು ಕೊಡುವುದರಿಂದ ಅದು ದುರುಪಯೋಗವಾಗುವುದಿಲ್ಲವೇ ಎಂಬುದನ್ನು ತಾವು ದಯಮಾಡಿ ವಿಚಾರ ಮಾಡಿ. ಪ್ರತಿಯೊಂದು ಪಟ್ಟಣದಲ್ಲೂ ಸಹ ಇಂತಹ ಪರಿಸ್ಥಿತಿ ಇರುತ್ತದೆ. ತಾವು ಒಂದು ಬಸ್‌ಸ್ಟಾಂಡ್ ಕಟ್ಟಿಸಬೇಕೆಂದು ಹೇಳಿ ಅದನ್ನು ಊರು ಹೊರಗೆ ತೆಗೆದುಕೊಂಡು ಹೋಗುತ್ತೇವೆಂದು ಹೇಳಿದರೆ ಅಲ್ಲಿನ ವ್ಯಾಪಾರಿಗಳು ಬಿಡುವುದಿಲ್ಲ ನಮಗೆ ವ್ಯಾಪಾರ ಹಾಳಾಗಿ ಹೋಗುತ್ತದೆ ಕಂಜೆಸ್ಟ್ ಆದರೂ . ಪರವಾಗಿಲ್ಲ ಇಲ್ಲೇ ಮಾಡಿ ಎಂದು ಹೇಳುತ್ತಾರೆ. ಇವತ್ತು ಸೂಳ್ಯ ಬಸ್‌ಸ್ಟಾಂಡ್ ಅನ್ನು ಏಕೆ ಕಟ್ಟುವುದಕ್ಕಾಗಿಲ್ಲ, ಊರು ಹೊರಗೆ ಕಟ್ಟಬೇಕೆಂದು ಹೇಳುತ್ತೇವೆ ಆದರೆ ಊರಿನ ಜನ ಬಡುವುದಿಲ್ಲ. ನಾವು ಇರತಕ್ಕಂತಹ ನಮ್ಮ ಬೇಸಿಕ್ ಕಾನ್‌ಸೆಪ್ಟ್ ಮಾಡ್ರನ್ ಸಿಟಿ ಯಾವ ರೀತಿ ಇರಬೇಕು ಪಟ್ಟಣ ಪ್ರದೇಶವೆಂದು ನಾವು ಕೆಲವು ಸೌಲಭ್ಯಗಳನ್ನು ಮಾಡಬೇಕಾಗುತ್ತದೆ. ಕೊನೇ ಪಕ್ಷ ಒಂದು ಬಸ್ ನಿಲ್ದಾಣ ಕಟ್ಟಿಸಿದರೆ ಅದು 20 ವರ್ಷ ಉಪಯೋಗವಾಗಬೇಕು. ಎಜುಕೇಷನ್ ಪರ್‌ಪಸ್ ಇರಬಹುದು, ಹಾಸ್ಪಲ್ ಪರ್‌ಪಸ್ ಇರಬಹುದು, ಸಾರಿಗೆ ಪರ್‌ಪಸ್ ಇರಬಹುದು ಕಮರ್ಷಿಯಲ್ ಕಟ್ಟಡ ಹಾಸ್ಪಲ್ ಕಟ್ಟಡ ಇರಬಹುದು ಇದನ್ನು ಪ್ಲಾನ್ ಮಾಡುವುದಕ್ಕೆ ದೂರದೃಷ್ಟಿ ಕೂಡ ಇರಬೇಕಾಗುತ್ತದೆ. ಒಬ್ಬ ಚೀಪ್ ಆಫೀಸರ್ ಯೋಗ್ಯತೆ ಕೆಪ್ಯಾಸಿಟಿ ಎಷ್ಟೆಂದು ತಮಗೆ ಗೊತ್ತಿರತಕ್ಕಂತಹ ವಿಚಾರವೇ. ಈ ಅಥಾರಿಟಿಯನ್ನು ವರ್ಗಾವಣೆ ಮಾಡುವುದರಿಂದ ಏನಾಗುತ್ತೆಂಬುದನ್ನು ವಿಚಾರ ಮಾಡಿ. ಸರಕಾರದ ಹತ್ತಿರ ಈ ಅಧಿಕಾರಗಳು ಇದೆ. ಟೌನ್ ಪ್ಲಾನಿಂಗ್ ಅಥಾರಿಟಿ ಪವರ್ಸ್‌ನ್ನು ನೀವು ಡೀಸೆಂಟ್ರಲೈಸ್ ಮಾಡಲಿಕ್ಕೆ ಹೊರಟಿದ್ದೀರಿ ಇದನ್ನು ಮರುಪರಿಶೀಲನೆ ಮಾಡಬೇಕು. ಇಲ್ಲವಾದಲ್ಲಿ ರಿಪರ್‌ಕೇಷನ್ ಆಗುತ್ತದೆ. ಎಲ್ಲಾ ಕಡೆಗಳಲ್ಲೂ ಪ್ಲಾನ್ ಸಿಸ್ಟಂ ಆಗಿ ಟೌನ್‌ಗಳನ್ನು ಬೆಳಸಬೇಕೆಂದಿದ್ದೇವೆ. ಇದು ಪೂರ್ತಿಯಾಗಿ ಅದರ ಬೇಸಿಕೆ ಕಾನ್‌ಸೆಪ್ಟ್‌ಗೆ ವಿರುದ್ಧವಾಗಿ ಹೋಗಿರತಕ್ಕಂಥಾದ್ದು ಇದೆ. ಇದನ್ನು ಪುನರ್ ಪರಿಶೀಲನೆ ಮಾಡಬೇಕೆಂದು ಕೇಳುತ್ತಿದ್ದೇನೆ. ಇದರಿಂದ ಬಹಳ ಕೆಟ್ಟ ಪರಿಣಾಮವಾಗುತ್ತದೆ. ಎಲ್ಲಾ ಕಡೆಗಳಲ್ಲೂ ಮಷ್ರೂಂ ಗ್ರೊತ್ ಆಗುತ್ತದೆ. ಬೆಂಗಳೂರು ನಗರದ ಸುತ್ತಮುತ್ತ ಮತ್ತು ಬೆಂಗಳೂರು ನಂತರ ಪಟ್ಟಣ ಪ್ರದೇಶಗಳು. ಏನು ಇದೆ ದಾವಣಗೆರೆ, ಮೈಸೂರು, ಇರಬಹುದು ಒಂದು ಕಾಲದಲ್ಲಿ ಮೈಸೂರು ಚಿಕ್ಕದಾಗಿತ್ತು ಈಗ ಎಲ್ಲಾ ಪಟ್ಟಣಗಳೂ ಬೆಳೆಯುತ್ತಿವೆ. ಸರಕಾರದ ಯಾವುದೇ ಹಿಡಿತಕ್ಕೆ ಒಳಾಗಾಗದೇ ಇರುವ ರೀತಿಯಲ್ಲಿ ತಮಗೆ ಕಂಟ್ರೋಲ್ ಬರುವುದಿಲ್ಲ ಆಗ ಮತ್ತೆ ಇದನ್ನು ವಾಪಸ್ಸು ಪಡೆಯತಕ್ಕಂತಹ ಕಾಲ ಸನಿಹದಲ್ಲೇ ಬರುತ್ತದೆ. ನಿಮ್ಮ ಹೆಚ್‌ಯುಡಿ ಇಲಾಖೆಯ, ಟೌನ್ ಪ್ಲಾನಿಂಗ್ ಇಲಾಖೆ ಹಾಗೂ ಕಾನೂನು ಇಲಾಖೆಯ ಅಧಿಕಾರಿಗಳನ್ನು ಕರೆಸಿ ಇದರ ಬಗ್ಗೆ ವಿಚಾರ ಮಾಡಿ. ಇದರಲ್ಲಿ ಪ್ರೆಸ್ಟೀಜ್ ಏನು ಇಲ್ಲ. ದುರುದ್ದೇಶವಿಟ್ಟುಕೊಂಡು ಮಾಡುತ್ತಿದ್ದೀರಿ ಎಂದು ನಾನು

ಹೇಳುತ್ತಿಲ್ಲ. ಇದರಿಂದಾಗಿ ಮಾಡ್ರನ್ ಟೌನ್ ಪ್ಲಾನಿಂಗ್ ಕಾನ್‌ಸೆಪ್ಟ್ ಏನು ಇದೆ ಅದು ನಾಶವಾಗುತ್ತದೆ. ವಿಲೇಜ್ ಪಂಚಾಯಿತಿ ಸೆಕ್ರೆಟರಿ ಇರುತ್ತಾರೆ. ಅವರು ಯಾವ ಮಟ್ಟದ ಜನರೆಂದು ಎಲ್ಲಾ ಶಾಸಕರಿಗೂ ಗೊತ್ತಿರತಕ್ಕಂತಹ ವಿಚಾರ. ವಿಲೇಜ್ ಪಂಚಾಯತಿ ಸೆಕ್ರೆಟರಿ, ವಿಲೇಜ್ ಅಕೌಂಟೆಂಟ್ ಇವರ ಬಗ್ಗೆ ಕೂಡ ಎಲ್ಲರಿಗೂ ಗೊತ್ತಿದೆ. ಈ ತರಹದ ಅಧಿಕಾರ ಏನು ಇದೆ ಅದನ್ನು ಅವರಿಗೆ ಕೊಡುವುದರಿಂದ ನಾಳೆ ನಾವೇನು ಸಿಸ್ಟಮ್ಯಾಟಿಕ್ ಪ್ಲಾನ್ ಗ್ರೋತ್ ಎಂದು ಹೇಳುತ್ತೇವೆ ಅದನ್ನು ಮಾಡುವುದಕ್ಕಾಗುವುದಿಲ್ಲ. ದಯವಿಟ್ಟು ಈ ತಿದ್ದುಪಡಿಯನ್ನು ವಾಪಸು ತೆಗೆದುಕೊಳ್ಳಿಯೆಂದು ನಾನು ಹೇಳುವುದಿಲ್ಲ. ಅದರ ಬಗ್ಗೆ ಪುನರ್ ವಿಮರ್ಶೆ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ..

. ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಉಪಾಧ್ಯಕ್ಷಣೀಯವರೇ, ಮಾನ್ಯ ವಿರೋಧಪಕ್ಷದ ಉಪನಾಯಕರು ಹೇಳಿದ ಹಾಗೆ ಪ್ಲಾನಿಂಗ್ ಮಾಡುವ ವಿಚಾರದಲ್ಲಿ ಅವರಿಗೆ ನಾವು ಪವರ್ಸ್ ಕೂಡುವುದಿಲ್ಲ. ಸಿಡಿಪಿ ಮತ್ತು ಒಡಿಪಿ ಸರ್ಕಾರದ ಹತ್ತಿರ ಪವರ್ಸ್ ಇದೆ. ಅವರಿಗೆ ಏನು ಪವರ್ಸ್ ಕೊಡುತ್ತಿದ್ದೇವೆಂದರೆ ಯಾವುದಾದರೂ ಬಿಲ್ಡಿಂಗ್ ಪ್ಲಾನ್, ಪ್ಲಾನ್ ಪ್ರಕಾರ ಮನೆ ಕಟ್ಟಬೇಕಾದರೆ, ಕಮೆನ್ಸ್‌ಮೆಂಟ್ ಸರ್ಟಿಪಿಕೇಟ್‌ಗೆ ಬಿ.ಡಿ.ಎ ಹತ್ತಿರ ಹೋಗಬೇಕಾಗುತ್ತದೆ. ಅದರ ಬದಲು ಕಾರ್ಪೊರೇಷನ್ ಕಮೀಷನರ್ ಕೊಡುವ ಆಸ್ಪದವಿದೆ. ಸಿಡಿಪಿ ಮತ್ತು ಒಡಿಪಿ ಒಳಗಡೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನನ್ನ ಆಬ್ಜೆಕ್ಷನ್ ಇರತಕ್ಕದ್ದು ಕಾರ್ಪೊರೇಷನ್ ಏರಿಯಾ ಲಿಮಿಟ್ ಅಂದರೆ ಬೆಂಗಳೂರು, ಮೈಸೂರು, ಮಂಗಳೂರು ಇಲ್ಲಿ ಒಬ್ಬರು ಸೀನಿಯರ್ ಆಫೀಸರ್ ಇರುತ್ತಾರೆ. ಅದಕ್ಕೆ ನಮ್ಮದೇನೂ ತಕರಾರು ಇಲ್ಲ. ತಮಗೆ ಒಂದು ವಿಚಾರ ಹೇಳುತ್ತೇನೆ. ಕಟ್ಟಡಗಳನ್ನು ಕಟ್ಟುವುದಕ್ಕೆ ಕಾರ್ಪೊರೇಷನ್ ಕಮೀಷನರ್ ಯಾರಿಗೆ ಪರ್ಮಿಶನ್ ಕೊಟ್ಟಿದ್ದಾರೆ? ಯಾವನೋ ಒಬ್ಬ ವಿಲೇಜ್ ಅಕೌಂಟೆಂಟ್ ಇರುತ್ತಾನೆ, ಈಗ ತಾವು ನಿಮ್ಮ ಕ್ಷೇತ್ರವನ್ನೆ ತೆಗೆದುಕೊಳ್ಳಿ, ಬೆಂಗಳೂರಿನ ಸುತ್ತ ಮುತ್ತ ವಿಲೇಜ್ ಅಕೌಂಟೆಂಟ್ ಆಗಿ ಟ್ರಾನ್ಸ್‌ಫರ್ ಮಾಡಿಸಿಕೊಳ್ಳುವುದಕ್ಕೆ ಬಹಳ ಒತ್ತಡವಿದೆ. ಅವರು ಯಾವುದೇ ಐ.ಎ.ಎಸ್. ಆಫೀಸರ್‌ಗಳಿಗೆ ಕಡಿಮೆಯಿಲ್ಲ. ಅವರು ಟ್ರಾನ್ಸ್‌ಫರ್ ಕೇಳುವುದು ಬೆಂಗಳೂರು ನಾರ್ತ್ ತಾಲ್ಲೂಕು, ಸೌತ್ ತಾಲ್ಲೂಕು, ಆನೇಕಲ್, ದೇವನಹಳ್ಳಿ, ಹೊಸಪೇಟೆ. ಮಾನ್ಯ ಕೆ.ಹೆಚ್. ಪಾಟೇಲ್‌ರವರು ರೆವಿನ್ಯೂ ಮಿನಿಸ್ಟರ್ ಆಗಿದ್ದರು ತಮ್ಮ ಮೇಲೆ ಎಷ್ಟೊಂದು ಒತ್ತಡ ಬಂದಿದೆ ಎನ್ನುವುದು ತಮಗೆ ಗೊತ್ತಿದೆ. ತಾವು ಅದಕ್ಕೆ ಸೊಪ್ಪು ಹಾಕಲಿಲ್ಲ ಅದು ಬೇರೆ ವಿಚಾರ. ನಾನು ಅರ್ಥಮಾಡಿಕೊಳ್ಳಬಲ್ಲೆ. ತಾವು ಅವರಿಗೆ ಪವರ್ಸ್ ಕೊಡುವ ಬಗ್ಗೆ ದಯವಿಟ್ಟು ವಿಚಾರ ಮಾಡಿ.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಉಪಾಧ್ಯಕ್ಷಣೀಯವರೆ, ಮಾನ್ಯ ಸದಸ್ಯರಾದ ಸಿಂಧ್ಯಾರವರು ಹೇಳಿದ ವಿಚಾರ ಏನೆಂದರೆ ಹೆಚ್.ಎ.ಎಲ್. ಸ್ಯಾನಿಟರಿ ಬೋರ್ಡ್ ಐ.ಟಿ.ಐ. ನೋಟಿಫೈಡ್ ಏರಿಯಾ ಬಗ್ಗೆ ಹೇಳಿದ್ದಾರೆ. ನಾವು ಕ್ಲಿಯರ್ ಆಗಿ ಹೇಳಿದ್ದೇವೆ.

"The powers and functions of the Planning Authority may, subject tot he approval of the State Government". ಆ ತರಹ ವಿಚಾರದಲ್ಲಿ ನಾವು ಅವರಿಗೆ ಪವರ್ಸ್ ಕೊಡುವುದಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಒಂದು ಸಾರಿ ಕೊಟ್ಟಮೇಲೆ ಅವರು ಶುರು ಮಾಡುತ್ತಾರೆ. All these people are very very influential . They are sound.

ಅವರು ಯಾರಿಗೆ ಬೇಕಾದರೂ ಭೈಬ್ ಮಾಡಬಹುದು. ನಿಮಗೆ ಇರತಕ್ಕ ಪವರ್ಸ್‌ಗಳನ್ನು ಅವರಿಗೆ ಕೊಡತಕ್ಕ ಅವಶ್ಯಕತೆ ಏನಿದೆ.?

ಶ್ರೀ ಕೆ.ಜೆ. ಜಾರ್ಜ್ : ನಾವು ಅಪ್ರೂವಲ್ ಕೊಡಬೇಕು. ಅವರಿಗೆ ಆಟೋಮೆಟಿಕ್ ಆಗಿ ಪವರ್ಸ್ ಬರುವುದಿಲ್ಲ. ಅದನ್ನು ನೋಡಿಕೊಂಡು ಅಪ್ರೂವಲ್ ಕೊಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಿಮಗೆ ಈಗಿರತಕ್ಕ ಕಾನೂನಿನಲ್ಲಿ ತೊಂದರೆಯೇನು? ಐದು ವರ್ಷಗಳಿಂದ 10 ವರ್ಷ ಮಾಡುವುದಕ್ಕೆ ನಿಮ್ಮದು ತೊಂದರೆಯೇನು? ದಯವಿಟ್ಟು ಇದನ್ನು ರೀ ಕನ್ಸೀಡರ್ ಮಾಡಿ ನಾಳೆ ತೆಗೆದುಕೊಳ್ಳೋಣ. I will try to come to your office and convince you.

ಶ್ರೀ ಕೆ.ಜೆ. ಜಾರ್ಜ್ : ಆ ವಿಚಾರ ನನಗೆ ಗೊತ್ತು ನಾನು ಹೇಳುತ್ತೇನೆ. ಒಂದು ಸಾರಿ ಸಿಡಿಪಿ ಮತ್ತು ಒಡಿಪಿ ನೇರವಾಗಿ ಮಾಡಿದ ಮೇಲೆ ಯಾವುದೇ ವಿಚಾರದಲ್ಲಿ ಅಬ್ಜೆಕ್ಷನ್ ಬರುತ್ತದೆನ್ನುವ ಮಾತು ಸರಿಯಲ್ಲ. ರೆಸಿಡೆನ್ಸಿಯಲ್ ಏರಿಯಾಗಳನ್ನು ಇಂಡಸ್ಟ್ರಿಯಲ್ ಏರಿಯಾ ಎಂದು ಪ್ಲಾನ್ ಪ್ರಕಾರ ಮಾಡಿ ಇಟ್ಟಿದ್ದಾರೆ. ಇಂಡಸ್ಟ್ರಿಯಲ್ ಏರಿಯಾದಲ್ಲಿ ರೆಸಿಡೆನ್ಸಿ ಏರಿಯಾ ಮಾಡಿದ್ದಾರೆ. ಸ್ಕೂಲ್‌ಗೆ ಜಾಗವಿರುವುದಿಲ್ಲ, ಈ ತರಹ ಮಾಡಬೇಕಾಗಿ ಬರುತ್ತದೆ. ಇದು ಮೊದಲನೆಯ ಸಲ ಹೊಸದಾಗಿ ಬರುತ್ತಿಲ್ಲ. ಹಿಂದಿನ ಸರ್ಕಾರ ಅಧಿಕಾರದಲ್ಲಿದ್ದಾಗ ಕೂಡ ಈ ಬಿಲ್ಲನ್ನು ಇಂಟರ್‌ಡ್ಯೂಸ್ ಮಾಡುವುದಕ್ಕೆ ಹೊರಟಿದ್ದರು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅದಕ್ಕೆ ನಾವು ಇದನ್ನು ಕೋಲ್ಡ್ ಸ್ಟೋರೇಜಿನಲ್ಲಿ ಇಟ್ಟಿದ್ದೆವು. ತಾವು ಹೆಚ್ಚುಡಿ ಸೆಕ್ರೆಟರಿ ಮತ್ತು ಲಾ ಸೆಕ್ರೆಟರಿಯವರನ್ನು ಕರೆಯಿಸಿ ಮಾತನಾಡಿ.

There is no prestige involved. I am not criticising. Whole heartedly, they are not for it, as I know.

ಶ್ರೀ ಕೆ.ಜೆ. ಜಾರ್ಜ್ : ಇದನ್ನು ಈಗಾಗಲೇ ಲಾ ಡಿಪಾರ್ಟ್‌ಮೆಂಟ್ ಮತ್ತು ಕ್ಯಾಬಿನೆಟ್ ಮುಂದೆ ಚರ್ಚೆ ಮಾಡಿ ತಂದಿದ್ದೇವೆ. ಇದರಲ್ಲಿ ಯಾವುದೇ ದುರುದ್ದೇಶವಿಲ್ಲ. ಮಾನ್ಯ ಸಿಂಧ್ಯರವರು ಹೇಳಿದಹಾಗೆ ಸರ್ಕಾರದ ಅನುಮತಿಯನ್ನು ಕೊಡಬೇಕಾಗುತ್ತದೆ.

"Subject to the approval of the State Government, be exercised and performed by the following authorities". ತಾವು ಹೇಳಿದಹಾಗೆ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಸ್ಯಾನಿಟರಿ ಏರಿಯಾಗಳಲ್ಲಿ ಮತ್ತಿತರೆ ಕಡೆಗಳಲ್ಲಾಗಲೀ ಏನಾದರೂ ದುರುಪಯೋಗವಾದರೆ ಅದನ್ನು ನಾವು ತಡೆಗಟ್ಟುತ್ತೇವೆ. ಇದು ಮಿಸ್‌ಯೂಸ್ ಆಗದ ಹಾಗೆ ನೋಡಿಕೊಳ್ಳುತ್ತೇವೆ. ಪವರ್ಸ್ ಮಿಸ್‌ಯೂಸ್ ಮಾಡಿಕೊಳ್ಳುವುದಕ್ಕೆ ಅವಕಾಶ ಕೊಡುವುದಿಲ್ಲ. We have not given. It is very clear. "The powers and functions of the planning authority may, subject to the approval of the State Government." ನಾವು ಕೊಟ್ಟರೆ ಮಾತ್ರ ಅದು ಬರುತ್ತದೆ. ಅದಕ್ಕೆ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಖಂಡಿತಾ ಪವರ್ಸ್ ಮಿಸ್‌ಯೂಸ್ ಆಗುತ್ತದೆ. ಮೆಜಾರಿಟಿ ಇದೆ ತಾವು ಪಾಸ್ ಮಾಡಿಕೊಳ್ಳಿ. ನನ್ನದೇನೂ ಇಲ್ಲ, ನಾನು ಇದನ್ನು ಅರ್ಥಮಾಡಿಕೊಳ್ಳಬಲ್ಲೆ. This is going to be misused.

ಶ್ರೀ ಕೆ.ಜೆ. ಜಾರ್ಜ್ : ಮಾನ್ಯ ಸಿಂಧ್ಯಾರವರು ಈ ಬಿಲ್ಲನ್ನು ಓದಿದ್ದಾ ಏನೋ ಗೊತ್ತಿಲ್ಲ. ನಾವು ಸರಿಯಾಗಿ ಮಾಡಿದ್ದೇವೆ.

Sri. K.H. Patil : Powers of delegation vests with the Government. Government may authorise any officer as and when required. We will take into consideration your advice.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನೊಬ್ಬ ಇನ್ನೊಬ್ಬರು ನಮ್ಮ ಕಡೆ ಇದ್ದಾರೆ. ನೀವು ಪಾಸ್ ಮಾಡಿಕೊಳ್ಳಿ ಏನು ಮಾಡುವುದು? ನಾನಂತೂ ಮಾನ್ಯಮಂತ್ರಿಗಳು ಕನ್ವೀನ್ಸ್ ಆಗಿದ್ದಾರೆಂದು ನನಗೆ ಗೊತ್ತಿದೆ. ಈ ಬಿಲ್ಲನ್ನು ವಾಪಸ್ಸು ತೆಗೆದುಕೊಂಡರೆ ಅವರ ಪಾರ್ಟಿಗೆ ತೊಂದರೆಯಾಗುತ್ತದೆಂದು ತೆಗೆದುಕೊಳ್ಳುವುದಿಲ್ಲವೋ ಏನೋ ಗೊತ್ತಿಲ್ಲ. Still I will make an appeal to you that this should be reconsidered.

ಶ್ರೀ ಕೆ.ಜೆ. ಜಾರ್ಜ್ : ಒಂದಂತು ಈ ವಿಚಾರದಲ್ಲಿ ಕನ್ವೀನ್ಸ್ ಆಗಿದ್ದೇನೆ. ಈ ಬಿಲ್ಲನ್ನು ಆದಷ್ಟು ಬೇಗ ಪಾಸ್ ಮಾಡಿಕೊಟ್ಟು ಸಾರ್ವಜನಿಕರಿಗೆ ಏನು ತೊಂದರೆಯಾಗುತ್ತದೆ ಅದನ್ನು ತಪ್ಪಿಸಬೇಕೆಂದು ಹೊರಟ್ಟಿದ್ದೇವೆಂದು ಮಾನ್ಯ ಸಿಂಧ್ಯಾರವರಲ್ಲಿ ಕೇಳಿಕೊಳ್ಳುತ್ತೇನೆ. ಈ ವಿಚಾರದಲ್ಲಿ ಬೇರೆ ಯಾವುದೇ ಉದ್ದೇಶವಿಲ್ಲ. ಸಾರ್ವಜನಿಕರ ಹಿತಕ್ಕಾಗಿ ಈ ಬಿಲ್ಲನ್ನು ತೆಗೆದುಕೊಂಡು ಬರುತ್ತಿದ್ದೇವೆ.

ಆದ್ದರಿಂದ, ಅಧ್ಯಕ್ಷರೆ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶ ಯೋಜನಾ (ತಿದ್ದುಪಡಿ) ವಿಧೇಯಕ, 1991ರನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾಪ ಏನೆಂದರೆ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶ ಯೋಜನಾ (ತಿದ್ದುಪಡಿ) ವಿಧೇಯಕ 1991ವನ್ನು ಪರ್ಯಾಲೋಚಿಸುವುದು.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

ಖಂಡ ಖಂಡವಾಗಿ ವಿಧೇಯಕವನ್ನು ಪರ್ಯಾಲೋಚಿಸುವುದು

2 ರಿಂದ 15 ಖಂಡಗಳು.

ಉಪಾಧ್ಯಕ್ಷರು: ಪ್ರಸ್ತಾಪ ಏನೆಂದರೆ 2 ರಿಂದ 15 ಖಂಡಗಳು ಎರಡೂ ಸೇರಿದಂತೆ ಈ ವಿಧೇಯಕದ ಅಂಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಖಂಡ 2ರಿಂದ 15ರವರೆಗೆ ಎರಡೂ ಸೇರಿದಂತೆ ಈ ವಿಧೇಯಕಕ್ಕೆ ಸೇರಿಸಲ್ಪಟ್ಟವು)

ಖಂಡ 1, ಇತ್ಯಾದಿ,

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ ಮೊದಲನೆಯ ಖಂಡ ಹೆಸರು ಮತ್ತು ಅವತರಣಿಕೆಗಳು ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕದ ಭಾಗವಾಗಿರುತ್ತದೆ.

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು

(ಪ್ರಥಮ ಖಂಡ, ಹೆಸರು ಮತ್ತು ಅವತರಣಿಕೆಗಳು ಹಾಗೂ ಅಧಿನಿಯಮಗೊಳಿಸುವ ಸೂತ್ರ ಸಂಹಿತೆ ವಿಧೇಯಕಕ್ಕೆ ಸೇರಿಸಲ್ಪಟ್ಟವು)

ಪ್ರಸ್ತಾವದ ಅಂಗೀಕಾರ

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿ): ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶ ಯೋಜನಾ (ತಿದ್ದುಪಡಿ) ವಿಧೇಯಕ, 1991ವನ್ನು ಅಂಗೀಕರಿಸಬೇಕೆಂದು ಕೋರುತ್ತೇನೆ.

ಉಪಾಧ್ಯಕ್ಷರು: ಪ್ರಸ್ತಾವ ಏನೆಂದರೆ, ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಪ್ರದೇಶ ಯೋಜನಾ (ತಿದ್ದುಪಡಿ) ವಿಧೇಯಕ 1991ವನ್ನು ತಿದ್ದುಪಡಿ ಮಾಡಿರುವಂತೆ ಅನುಮೋದಿಸುವುದು.

ಪ್ರಸ್ತಾವನೆ ಅಂಗೀಕರಿಸಲ್ಪಟ್ಟಿತು ಮತ್ತು ವಿಧೇಯಕಕ್ಕೆ ಅನುಮೋದನೆ ದೊರೆಯಿತು

ಕರ್ನಾಟಕ ಭೂ (ವರ್ಗಾವಣೆಯ ಮೇಲೆ ನಿರ್ಬಂಧ) ವಿಧೇಯಕ, 1991

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿ): ಮಾನ್ಯ ಉಪಾಧ್ಯಕ್ಷರೇ, ಕರ್ನಾಟಕ ಭೂ (ವರ್ಗಾವಣೆಯ ಮೇಲೆ ನಿರ್ಬಂಧ) ವಿಧೇಯಕ, 1991ವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪ್ರಸ್ತಾಪವನ್ನು ಮಂಡಿಸಲಾಯಿತು

ಶ್ರೀ ಕೆ.ಜೆ. ಜಾರ್ಜ್ (ವಸತಿ ಮತ್ತು ನಗರಾಭಿವೃದ್ಧಿ ಮಂತ್ರಿ): ಸನ್ಮಾನ್ಯ ಉಪಾಧ್ಯಕ್ಷರೇ, ನಮ್ಮ ಬಿ.ಡಿ.ಎ ಮತ್ತು ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯವರಿಂದ ನೋಟಿಫಿಕೇಶನ್ ಆದಕೂಡಲೇ ಕೆಲವರು ಏನು ಮಾಡುತ್ತಾರೆ ಎಂದರೆ ಲಾಟ್‌ನಲ್ಲಿ ಹೋಗಿಬಿಟ್ಟು ಮಾರುತ್ತಾರೆ. ಇದನ್ನು ನಾವು ತಡೆಹಿಡಿಯಬೇಕಾಗುತ್ತದೆ. ಕೆಲವೊಂದು ಸಲ ಲಿಟಿಗೇಶನ್ ಬರುತ್ತದೆ. ಏಕೆಂದರೆ ಯಾರೋ ಗೊತ್ತಿಲ್ಲದವರು ಹೋಗಿಬಿಟ್ಟು ಪರ್ಚೇಸ್ ಮಾಡಿ ಅವರು ಸಹಿತ ತೊಂದರೆಗೆ ಒಳಗಾಗುತ್ತಾರೆ. ಮತ್ತೆ ಅನಧಿಕೃತ ಕಟ್ಟಡಗಳು ಸಹ ಇಂತಹ ಜಾಗದಲ್ಲಿ ಬರುತ್ತವೆ. ಅರ್ಬನ್ ಡೆವಲಪ್‌ಮೆಂಟ್ ಅಥಾರಿಟಿಯವರು ನೋಟಿಫಿಕೇಶನ್ ಮಾಡಿದಮೇಲೆ ಆ ಲ್ಯಾಂಡನ್ನು ಬೇರೆಯವರಿಗೆ ಮಾರುವುದಕ್ಕೆ ನಿರ್ಬಂಧವನ್ನು ತರುತ್ತಿದ್ದೇನೆ. ಇದರ ಪ್ರಕಾರ ರಿಜಿಸ್ಟ್ರೇಷನ್ ಮಾಡುವುದಕ್ಕೆ ಸಾಧ್ಯವಿಲ್ಲ, ಈಗಾಗಲೇ ಡೆಲ್ಲಿ ಡೆವಲಪ್‌ಮೆಂಟ್ ಅಥಾರಿಟಿಯಲ್ಲಿ ಇದು 1972ನೇ ಇಸವಿಯಿಂದ ಜಾರಿಯಲ್ಲಿದೆ. ಅದರ ಪ್ರಕಾರ ನಾವೂ ಇದನ್ನು ಮಾಡುತ್ತಿದ್ದೇನೆ.

ಉಪಾಧ್ಯಕ್ಷರು: ಈಗ ಪರ್ಯಾಲೋಚನಾ ಪ್ರಸ್ತಾಪವನ್ನು.....

ಶ್ರೀ ಪಿ.ಜಿ.ಆರ್. ಸಿಂಧ್ಯ: ತಾವು ಇದನ್ನು ಮತಕ್ಕೆ ಹಾಕಬೇಡಿ. ನಾನು ಮಾತನಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷಿಣಿಯರೇ, ಈಗ ತಾನೇ ಮಾನ್ಯ ಸಭಾನಾಯಕರೂ, ಮುಖ್ಯಮಂತ್ರಿಗಳೂ ಆಶ್ವಾಸನೆ ಕೊಟ್ಟು ಹೋದರು. ಬಿ.ಡಿ.ಎ. ಬಗ್ಗೆ ಸಮಗ್ರವಾಗಿ ವಿಚಾರ ಮಾಡುತ್ತೇವೆ, ಇದನ್ನು ಪಾಸ್ ಮಾಡಿಕೊಡಿ ಎಂದು. ನಿಮ್ಮ ಲೆಜಿಸ್ಲೇಚರ್ ಪಾರ್ಟಿ ಸೆಕ್ರೆಟರಿಗಳಾದ ಅನಂತಕೃಷ್ಣರವರೇ ಕಳೆದ ಸಾರಿ ಮಾತನಾಡಿ, ಬಿ.ಡಿ.ಎ. ಬಗ್ಗೆ ಸಮಗ್ರವಾಗಿ ವಿಚಾರ ಮಾಡಬೇಕೆಂದೂ ಹೇಳಿದ್ದರು. ಬಿ.ಡಿ.ಎ.ಗೆ ಸಂಬಂಧಿಸಿದ ವಿಚಾರಗಳನ್ನು ಪೀಸ್‌ಮೀಲ್ ಆಗಿ ತೆಗೆದುಕೊಂಡು ಬರುತ್ತಿದ್ದೀರಿ. ಒಂದು ಆಶ್ವಾಸನೆಯನ್ನು ತಮ್ಮಿಂದ ಹೇಳುತ್ತೇನೆ. ಬಿ.ಡಿ.ಎ.ನಲ್ಲಿ ಸೈಟ್‌ಗಳಿಗಾಗಿ 20 ಕೋಟಿ ರೂಪಾಯಿ ಸಾರ್ವಜನಿಕರು ಇಟ್ಟಿದ್ದಾರೆ. ಇದು ನಮ್ಮ ಕಾಲದಲ್ಲಿ ಆಗಿರುವುದು, ನಿಮ್ಮ ಕಾಲದಲ್ಲಿ ಎಂದು ನಾನು ಅಕ್ಯೂಸ್ ಮಾಡುತ್ತಾ ಇಲ್ಲ. 7ನೇ ಬಾರಿ, 8ನೇ ಬಾರಿ ಪ್ರಯತ್ನ ಮಾಡಿದರೂ ಸೈಟುಗಳನ್ನು ಕೊಡದೆ 20 ಕೋಟಿ ರೂಪಾಯಿ ಡಿಪಾಸಿಟ್ ಇಟ್ಟುಕೊಂಡಿದ್ದೀರಿ. ಅದರ ಬಡ್ಡಿ ಆಧಾರದ ಮೇಲೆ ಅಲ್ಲಿರತಕ್ಕವರಿಗೆ ಸಂಬಳ ಕೊಡುತ್ತಿದ್ದೀರಿ. ಮೊದಲನೆಯದಾಗಿ ತಾವು ಇದನ್ನು ವಾಪಸ್ ಕೊಡತಕ್ಕ ಆಶ್ವಾಸನೆ ಕೊಡಿ. ಎರಡನೆಯದಾಗಿ ಸೈಟ್ ವಿಚಾರದಲ್ಲಿ ಬಿ.ಡಿ.ಎನಲ್ಲಿ ಈ ರೀತಿ ಆಗಬಾರದಿತ್ತು. ಇವತ್ತು ಒಬ್ಬರೇ ನಾಲ್ಕೈದು ಸೈಟುಗಳನ್ನು ತೆಗೆದುಕೊಂಡಿರುವವರೂ ಇದ್ದಾರೆ. 10ವರ್ಷದವರೆಗೆ ಬೇರೆಯವರು ತೆಗೆದುಕೊಳ್ಳಬಾರದು ಎಂಬ ನಿಬಂಧನೆ ಇದೆ. ಆದರೂ ಅನೇಕರು ತೆಗೆದುಕೊಂಡಿದ್ದಾರೆ ಮತ್ತು ಬೇಕಾದಷ್ಟು ವ್ಯವಹಾರ ನಡೆಸಿದ್ದಾರೆ. ಇಂಥವರಿಗೆ ಪರ್ಮಿಷನ್ ಸಿಕ್ಕು ಮನೆ ಕಟ್ಟಿಕೊಳ್ಳುವುದಕ್ಕಾಗುತ್ತಾ